

# ಪ್ರಯೋಗಗಳ ಪಥದಲ್ಲಿ ಕಾರ್ತಿಕ್ ಮಹೇಶ್

ಬಹು ಬಗೆಯ ಪಾತ್ರಗಳಲ್ಲಿ, ಜಾನರ್‌ಗಳಲ್ಲಿ ತಮ್ಮನ್ನು ಪ್ರಯೋಗಿಸಿಕೊಳ್ಳುತ್ತಿರುವ ನಟ ಕಾರ್ತಿಕ್ ಮಹೇಶ್, ಬಹುಭಾವಗಳ ಮಿಶ್ರಣದ ಸಿನಿಮಾವೊಂದಕ್ಕೆ ಸಹಿ ಹಾಕಿದ್ದಾರೆ. 'ಅದೊಂದಿತ್ತು ಕಾಲ' ಸಿನಿಮಾ ನಿರ್ದೇಶಕ ಕೀರ್ತಿ ಕೃಷ್ಣಪ್ಪ ಅವರು ರೂಪಿಸುತ್ತಿರುವ ಹೊಸ ಸಿನಿಮಾಗೆ ಅವರು ನಾಯಕನಾಗಿ ಕಾಣಿಸಿಕೊಳ್ಳುತ್ತಿರುವುದಾಗಿ ತಿಳಿದುಬಂದಿದೆ.

ಕನ್ನಡ ಕಿರುತೆರೆಯಲ್ಲಿ ಮಿಂಚಿ 'ಡೊಳ್ಳು' ಸಿನಿಮಾ ಮೂಲಕ ದೊಡ್ಡ ತೆರೆಗೆ ಕಾಲಿಟ್ಟ ಕಾರ್ತಿಕ್ ಮಹೇಶ್, ನಿಧಾನವಾಗಿ ತಮ್ಮ ಆಯ್ಕೆಗಳನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. ಈಚೆಗೆ 'ಅಲ್ಫಾ'ದಲ್ಲಿ ನಟಿಸಿದ್ದ ಕಾರ್ತಿಕ್, ಸಿಂಪಲ್ ಸುನಿ ನಿರ್ದೇಶನದ 'ರಿಚಿ ರಿಚ್' ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ. ಪನ್ನಗಾಭರಣ ಅವರ ನಿರ್ದೇಶನದ ಹಾಸ್ಯ ಪ್ರಧಾನ ಸಿನಿಮಾದಲ್ಲಿಯೂ ತೊಡಗಿದ್ದಾರೆ. ಈ ಬೆಳವಣಿಗೆಗಳ ನಡುವೆಯೇ ಈ ಹೊಸ ಸಿನಿಮಾಗೆ ಹಸಿರು ನಿಶಾನೆ ತೋರಿದ್ದಾರೆ.

ಭಾವನೆಗಳು, ಹುಡುಗಾಟ, ಪ್ರೀತಿ ಹಾಗೂ ಥ್ರಿಲ್ಲಿಂಗ್ ಈ ಎಲ್ಲ ಅಂಶಗಳನ್ನು ಒಳಗೊಂಡಿರುವ ಸಿನಿಮಾದಲ್ಲಿ ಅಭಿನಯಿಸಲು ಸಜ್ಜಾಗುತ್ತಿದ್ದು, ಇದೇ ಏಪ್ರಿಲ್‌ನಲ್ಲಿ ಸಿನಿಮಾ ಚಿತ್ರೀಕರಣ ಆರಂಭವಾಗಲಿದೆ. 'ಕಾಮಿಡಿ ಕಿಲಾಡಿ' ಖ್ಯಾತಿಯ ಜಗ್ಗಪ್ಪ ಹಾಗೂ ರವಿಶಂಕರ್ ಕೂಡ ಪ್ರಮುಖ ಪಾತ್ರದಲ್ಲಿರುವುದಾಗಿ ತಿಳಿದುಬಂದಿದೆ. ಜಹಂಗೀರ್, ಪ್ರಕಾಶ್ ತುಮಿನಾಡ್ ಹಾಗೂ ಯಶ್ ಶೆಟ್ಟಿ ಅವರನ್ನೂ ಒಳಗೊಳ್ಳುವ ಆಲೋಚನೆ ಸಿನಿಮಾ ತಂಡಕ್ಕಿರುವುದಾಗಿ ತಿಳಿದುಬಂದಿದೆ. ■

# ಥ್ರಿಲ್ಲರ್ ಲೋಕದಲ್ಲಿ ನಿರೂಪ್ ಲಹರಿ

'ಸತ್ಯ ಸನ್ ಆಫ್ ಹರಿಶ್ಚಂದ್ರ', 'ಅಮೆರಿಕ ಅಮೆರಿಕ 2', 'ಅತಿಕಾಯ' ಸಿನಿಮಾ ಬಿಡುಗಡೆಯನ್ನು ಎದುರು ನೋಡುತ್ತಿರುವ ನಟ ನಿರೂಪ್ ಭಂಡಾರಿ, ಈ ನಡುವಲ್ಲೇ ಮತ್ತೊಂದು ಥ್ರಿಲ್ಲರ್ ಸಿನಿಮಾಗೆ ಸಹಿ ಹಾಕಿದ್ದಾರೆ.

ಈಚೆಗೆ ನಿರೂಪ್ ಅಭಿನಯದ ಸಿನಿಮಾಗಳು ಬಿಡುಗಡೆ ಕಂಡಿಲ್ಲವಾದರೂ, ತೆರೆ ಹಿಂದೆ ಸಾಕಷ್ಟು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದಾರೆ. ಹಲವು ಪ್ರಾಜೆಕ್ಟ್‌ಗಳಲ್ಲಿ ಬ್ಯುಸಿಯಾಗಿದ್ದು, ಕಮರ್ಷಿಯಲ್ ಎಂಟರ್‌ಟೇನರ್ ಕಥೆಗೆ ಅಣಿಯಾಗುತ್ತಿದ್ದಾರೆ. ಲಿಯೊ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಸಿನಿಮಾದಲ್ಲಿ ನಿರೂಪ್ ಭಂಡಾರಿಗೆ ಐಶ್ವರ್ಯ ಶರ್ಮಾ ಜೋಡಿಯಾಗಿದ್ದಾರೆ.

ರವೀಶ್ ಆರ್.ಸಿ. ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಇದೇ ಮಾರ್ಚ್ ಕೊನೆಗೆ ಚಿತ್ರೀಕರಣ ಆರಂಭವಾಗಲಿದೆ. ಈ ಸಿನಿಮಾ ಮೂಲಕ ಲಿಯೊ ಕೂಡ ನಿರ್ದೇಶನಕ್ಕೆ ಅಡಿಯಿಡುತ್ತಿದ್ದಾರೆ. ಲಿಯೊ ಅವರು ತಮಿಳು ಸಿನಿಮಾದಲ್ಲಿ ಸ್ಕ್ರಿಪ್ಟ್ ಕನ್ಸಲ್ಟಂಟ್ ಹಾಗೂ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಇದೀಗ ಕನ್ನಡದಲ್ಲಿ ನಿರ್ದೇಶನದ ಉಸ್ತುವಾರಿ ಹೊತ್ತಿದ್ದಾರೆ. ಲಿಯೊ ಅವರ ಬರವಣಿಗೆ ಶಕ್ತಿಯೇ ಈ ಸಿನಿಮಾ ಒಪ್ಪಲು ಕಾರಣ ಎಂದೂ ನಿರೂಪ್ ಕೊಂಡಾಡಿದ್ದಾರೆ.

'ನಾನು ಬಹುಮುಖ್ಯವಾಗಿ ಕಥೆಯನ್ನು ನೋಡುತ್ತೇನೆ. ಈ ಸಿನಿಮಾದ ಬರವಣಿಗೆಯ ಶಕ್ತಿ ನನ್ನನ್ನು ಸಿನಿಮಾ ಒಪ್ಪಲೇಬೇಕು ಎಂದು ಪ್ರೇರೇಪಿಸಿತು. ನಿರೂಪಣೆಯೊಂದಿಗೆ ಅವರು ಕಥೆಯನ್ನು ಸಿದ್ಧಮಾಡಿಕೊಂಡು ಬಂದಾಗ, ಫಿಲ್ಮ್ ಮೇಕಿಂಗ್ ಕುರಿತು ಚರ್ಚೆ ಮಾಡಿದೆವು. ಅವರ ಆಲೋಚನಾ ರೀತಿ ನನಗೆ ಬಹಳ ಇಷ್ಟವಾಯಿತು. ಸಿನಿಮಾ ಕಟ್ಟುವುದು ಹಲವರು ಸೇರಿದಾಗಲೇ. ನಾನು ಇದರ ಭಾಗವಾಗಬೇಕು ಎಂದು ಅನ್ನಿಸಿತು' ಎಂದು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ ನಿರೂಪ್.

ಈ ಸಿನಿಮಾ ಜೊತೆಜೊತೆಗೆ ಇನ್ನಷ್ಟು ಸಿನಿಮಾಗಳು ನಿರೂಪ್ ಬತ್ತಳಿಕೆಯಲ್ಲಿವೆ. 'ಸತ್ಯ ಸನ್ ಆಫ್ ಹರಿಶ್ಚಂದ್ರ', 'ಅಮೆರಿಕ ಅಮೆರಿಕ 2' ಬಿಡುಗಡೆಗೆ ಸಿದ್ಧವಾಗಿವೆ. 'ಅತಿಕಾಯ' ಸಿನಿಮಾ ಚಿತ್ರೀಕರಣ ಮುಗಿದಿದೆ.



'ಪ್ರೇಕ್ಷಕರು ಈ ಹಿಂದೆ ನೋಡಿರದ ಗೆಟಪ್‌ನಲ್ಲಿ ನನ್ನನ್ನು ನೋಡಲಿದ್ದಾರೆ. ಮಾಸ್‌ಲೈನ್ ಡೈಲಾಗ್‌ಗಳಿದ್ದು, ನನ್ನ ಈ ಲುಕ್ ಪ್ರೇಕ್ಷಕರಿಗೆ ಹೊಸತೆನಿಸುತ್ತದೆ. ಮಾಸ್ ಸಿನಿಮಾಗೂ ನನ್ನನ್ನು ಹೊಂದಿಸಿಕೊಂಡಿದ್ದೇನೆ. ಆದರೆ ನನಗೆ ಸ್ಟೀರಿಯೊಟೈಪ್ ಆಗಲು ಇಷ್ಟವಿಲ್ಲ. ಸ್ವಲ್ಪ ಸಮಯ ಥ್ರಿಲ್ಲರ್ ಸ್ಕ್ರಿಪ್ಟ್‌ಗಳನ್ನು ದೂರವಿಡಬೇಕೆಂದುಕೊಂಡಿದ್ದೇನೆ. ಬೇರೆ ಬೇರೆ ರೀತಿಯ ಕಥೆಯಲ್ಲಿ, ವಿಭಿನ್ನವಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳೋಣ ಎಂದುಕೊಂಡಿದ್ದೇನೆ' ಎಂದು ತಮ್ಮ 'ಅತಿಕಾಯ' ಸಿನಿಮಾ ಕುರಿತು ಮಾತನಾಡುವ ಸಂದರ್ಭ ವಿವರಿಸಿದ್ದಾರೆ. ■